ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-1 Issue 2, Sep-Oct 2019, 46-52**
**©*IIMRD*, Mysuru**

IIMRD JOURNALS

**www.iimrd.com**

# ಪರಿಸರ ಸಂರಕ್ಷಣೆಯಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಮಹತ್ವ :ಒಂದು ಅವಲೋಕನ

**ಸೌಮ್ಯ ಕೆ[1] ಮತ್ತು ಪ್ರೊ.ಡಾ.ಸಿ.ಬಸವರಾಜು[2]**

**ಪೀಠಿಕೆ**

***'ಹಸಿರೆಂಬುದು ಸಮೃದ್ಧಿಯ ಸಂಕೇತವಾದರೆ, ಕಂದು ಬಣ್ಣ ಬಂಜರಿನ ಸಂಕೇತವಾಗುವುದು. ಆ ಸಂದರ್ಭದಲ್ಲಿ ನ್ಯಾಯಾಲಯಗಳು ಪರಿಹಾರಕಗಳಾಗುತ್ತವೆ'– ಚೇತನ್ ಸಿಂಗ್ ಮೆಹತಾ***[3]

ನೈಸರ್ಗಿಕ ಹಾಗೂ ಕೃತಕ ಪರಿಸರಗಳ ಸಮ್ಮಿಶ್ರಣವನ್ನು ಹೊಂದಿರುವ ಮಾನವನ ಪರಿಸರವು ಇಂದು ಅವನತಿಯ ಹಾದಿಯನ್ನು ಹಿಡಿದಿದೆ. ಮಾನವ ಇಂದು ಪರಿಸರದ ನಿಜವಾದ ಮೌಲ್ಯವನ್ನು ತಿಳಿಯದೇ ಭೌತಿಕ ಸ್ವತ್ತಿಗೆ ಆಕರ್ಷಿತನಾಗಿ ಪರಿಸರದ ನಾಶಕ್ಕೆ ಕಾರಣನಾಗುತ್ತಿದ್ದಾನೆ. ಪ್ರಸ್ತುತ ಪ್ರತಿಯೊಬ್ಬ ವ್ಯಕ್ತಿಯೂ ಪರಿಸರದ ಮಹತ್ವವನ್ನು ತಾನೂ ತಿಳಿದು, ಇತರರಿಗೂ ತಿಳಿಸಿಕೊಡಬೇಕಾದ ಅನಿವಾರ್ಯತೆಯಿದೆ. ಲೇಖಕರ ಈ ಲೇಖನವು ಮುಖ್ಯವಾಗಿ ಪರಿಸರ, ಪರಿಸರದ ಮಹತ್ವ, ಈ ನಿಟ್ಟಿನಲ್ಲಿ ಇರುವ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಅಗತ್ಯ ಹಾಗೂ ಪರಿಸರ ಸಂಬಂಧಿತ ಇನ್ನೂ ಹಲವಾರು ಅಂಶಗಳನ್ನು ತಿಳಿಸಿಕೊಡುವ ಉದ್ದೇಶವನ್ನು ಹೊಂದಿದೆ.

ಮನುಷ್ಯನು ಭೂಮಿಯ ಮೇಲೆ ವಾಸಿಸಿಕೊಂಡಿರಬೇಕೆಂದರೆ ಆತ ಪ್ರಕೃತಿಯೊಂದಿಗೆ ಸಾಮರಸ್ಯದಿಂದಿರಬೇಕು. ಪ್ರಕೃತಿ ಎಂದರೆ ನಮ್ಮ ಸುತ್ತ ಮುತ್ತಲಿರುವ ಭೂಮಿ, ನೀರು, ಗಾಳಿ, ಮರ, ಗಿಡ, ಸೂಕ್ಷ್ಮಾಣು ಜೀವಿಗಳು ಹಾಗೂ ಇತರ ಅತೀ ಸೂಕ್ಷ್ಮಾಣು ಜೀವಿಗಳು ಹೇಗೆ ಎಲ್ಲವನ್ನೂ ಒಳಗೊಂಡಿರುವುದೇ ಆಗಿದೆ. ಮನುಷ್ಯನು ಪ್ರಸ್ತುತ ಹಸಿರನ್ನು ಸಂರಕ್ಷಿಸಿಕೊಳ್ಳುವ ಮೂಲಕ ತನ್ನ ಉಸಿರನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿಗೆ ಬಂದು ತಲುಪಿದ್ದಾನೆ. ಇದಕ್ಕೆ ಹಲವಾರು ಕಾರಣಗಳಿವೆ.

**ಅಧ್ಯಯನದ ಉದ್ದೇಶಗಳು:**

ಪ್ರಸ್ತುತ ಅಧ್ಯಯನವು ಕೆಳಗಿನ ಪ್ರಮುಖ ಉದ್ದೇಶಗಳನ್ನು ಒಳಗೊಂಡಿದೆ.

- ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಯುವುದು.
- ಪರಿಸರ ಸಂರಕ್ಷಣೆಯಲ್ಲಿ ಪ್ರಜ್ಞಾವಂತ ಪ್ರಜೆಗಳ ಪಾತ್ರವನ್ನು ತಿಳಿಸುವುದು.

---

[1] *ಸಂಶೋಧನಾ ವಿದ್ಯಾರ್ಥಿ, ಕಾನೂನು ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.ಮೈಸೂರು.*

[2] *ನಿರ್ದೇಶಕರು ಮತ್ತು ಡೀನರು, ಕಾನೂನು ಅಧ್ಯಯನ ವಿಭಾಗ, ಕಾನೂನು ಶಾಲೆ, ಮಾನಸಗಂಗೋತ್ರಿ, ಮೈಸೂರು.*

[3] *https://quoteprism.net.*

- ಪರಿಸರ ಸಂರಕ್ಷಣೆಯಲ್ಲಿ ನ್ಯಾಯಾಲಯಗಳ ಪಾತ್ರವನ್ನು ತಿಳಿದುಕೊಳ್ಳುವುದು.
- ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಮಹತ್ವವನ್ನು ತಿಳಿಯುವುದು.
- ಪರಿಸರ ಸಂರಕ್ಷಣೆಗೆ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.

**ಪರಿಸರ ಹಾಗೂ ಪರಿಸರ ಸಂರಕ್ಷಣೆಯ ಅರ್ಥ/ವ್ಯಾಖ್ಯಾನ**

ಪರಿಸರ ಎಂಬ ಪದವು *Environment* ಎಂಬ ಪದದಕನ್ನಡಾನುವಾದವಾಗಿದ್ದು, ಈ ಆಂಗ್ಲ ಪದವು ಫ್ರೆಂಚ್ ಪದವಾದ *Environ* ಎಂಬ ಪದದಿಂದ ಉಗಮಿಸಿದೆ. *Environ* ಎಂಬ ಪದವು ನಮ್ಮ *'ಸುತ್ತಮುತ್ತಲಿನ'* [4] ಎಂಬ ಅರ್ಥವನ್ನು ಕೊಡುತ್ತದೆ. ಬ್ಲಾಕ್ಸ್‌ರವರು 'ಪರಿಸರವೆಂದರೆ ಜೀವಾಂಶಗಳ ಸುತ್ತಮುತ್ತಲಿನ ಅಸ್ತಿತ್ವವೆಂದ [5] ಹೇಳಿದ್ದಾರೆ. ಇಲ್ಲಿನ 'ಸುತ್ತಮುತ್ತಲು' ಎಂಬ ಪದವು ನೈಸರ್ಗಿಕ, ಜೈವಿಕ ಅಂಶಗಳು, ಅವುಗಳ ಬೆಳವಣಿಗೆ ಇನ್ನೂ ಮುಂತಾದ ಅಂಶಗಳನ್ನು ಪ್ರತಿನಿಧಿಸುತ್ತದೆ ಎಂದೆನ್ನಬಹುದಾಗಿದೆ.

1986ರ ಪರಿಸರ ಸಂರಕ್ಷಣಾಕಾಯ್ದೆಯ ಕಲಂ2 (a) ಯು 'ಪರಿಸರವೆನ್ನುವುದು ನೀರು, ಗಾಳಿ, ಭೂಮಿ ಹಾಗೂ ಅವುಗಳನ್ನು ಅಂತರ್ ಸಂಬಂಧಿತವಾಗಿ ಒಳಗೊಂಡಿರುವ ಮಾನವಜೀವಿಗಳು, ಇತರ ಜೀವಿಗಳು, ಸಸ್ಯಗಳು, ಸೂಕ್ಷ್ಮಾಣು ಜೀವಿಗಳೆಲ್ಲವನ್ನೂ ಒಳಗೊಂಡಿದೆ' ಎಂದು ವ್ಯಾಖ್ಯಾನಿಸಲಾಗಿದೆ. ಪರಿಸರ ಹಾಗೂ ಮಾನವ ಜೀವಿಗಳ ಒಳಿತಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಹಾಗೂ ಪರಿಸರ ಸಂರಕ್ಷಣೆ ಅತೀ ಅಗತ್ಯವಾಗಿದೆ. ಬಡತನ, ಜನಸಂಖ್ಯಾ ಹೆಚ್ಚಳ, ಅರಣ್ಯನಾಶ, ಕೈಗಾರಿಕೀಕರಣ, ತಂತ್ರಜ್ಞಾನ ದುರ್ಬಳಕೆ ಹೀಗೆ ಮುಂತಾದ ಕಾರಣಗಳಿಂದ ನಮ್ಮ ಪ್ರಕೃತಿ ಮಲಿನವಾಗುತ್ತಿದೆ. ಪರಿಸರ ಮಾಲಿನ್ಯ ಮಾಡುವ ಮೂಲಕ ಮಾನವ ತನ್ನ ನಾಶಕ್ಕೆ ತಾನೇ ಕಾರಣನಾಗುತ್ತಿದ್ದಾನೆ.

**ಸಂವಿಧಾನದಡಿಯಲ್ಲಿ ಪರಿಸರ**

ನೇರವಾಗಿ ಹೇಳುವುದಾದರೆ ಮೂಲಭೂತ ಹಕ್ಕುಗಳಲ್ಲಿ, ಸ್ಪಷ್ಟಪದಗಳಲ್ಲಿ 'ಪರಿಸರ ಸಂರಕ್ಷಣೆ' ಎಂಬ ವಾಕ್ಯವಿಲ್ಲ. ಆದರೆ ಅನುಚ್ಛೇದ 21ರ ಅಡಿಯಲ್ಲಿ ಪರೋಕ್ಷವಾಗಿ ಪರಿಸರದ ಹಕ್ಕನ್ನು ಜೀವಿಸುವ ಹಕ್ಕಿನೊಡನೇ ಸೇರಿಸಲಾಗಿದೆ. 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ಮಾಡುವ ಎರಡು ಮುಖ್ಯ ಅನುಚ್ಛೇದಗಳಾದ ಅನುಚ್ಛೇದ 48A ಹಾಗೂ 51(A) (G) ಯನ್ನು ನಮ್ಮ ಸಂವಿಧಾನದ ರಾಜ್ಯನೀತಿ ನಿರ್ದೇಶಕ ತತ್ವಗಳೊಂದಿಗೆ ಸೇರಿಸಲಾಯಿತು.

ಅನುಚ್ಛೇದ 48A ಪ್ರಕಾರ ರಾಜ್ಯವುತನ್ನ ವ್ಯಾಪ್ತಿಯಲ್ಲಿನ ಅರಣ್ಯಗಳು ಹಾಗೂ ವನ್ಯಜೀವಿಗಳನ್ನು ರಕ್ಷಿಸುವ ಮೂಲಕ ಪರಿಸರವನ್ನು ಸಂರಕ್ಷಿಸತಕ್ಕದ್ದು. ಅನುಚ್ಛೇದ 51(A) (G) ಅರಣ್ಯಗಳು, ನದಿಗಳು, ತೊರೆಗಳು ಹಾಗೂ ವನ್ಯಜೀವಿಗಳು ಮುಂತಾದ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ

---

[4] *Myneni, S.R. (2014). Environmental Law, Asia Law House, New Edition.*
[5] *Featuring Black's Law Dictionary Free online Legal Dictionary, 2nd Edition, http://thelowdictionary.org/envrionment/*

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ವೃದ್ಧಿಸುವುದು ನಮ್ಮ ಕರ್ತವ್ಯವಾಗಿರತಕ್ಕದ್ದು ಎಂಬುದಾಗಿ ಹೇಳಿದೆ. ಅನುಚ್ಛೇದ 14 ಭಾರತದ ರಾಜ್ಯ ಕ್ಷೇತ್ರದಲ್ಲಿ ಯಾರೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕುದಲ್ಲ. ಹಾಗೂ ಅನುಚ್ಛೇದ 21 ಕಾನೂನಿನ ಮೂಲಕ ಸ್ಥಾಪಿತವಾಗಿರುವ ಪ್ರಕ್ರಿಯೆಗೆ ಅನುಸಾರವಾಗಿ ಹೊರತುಪಡಿಸಿ ಯಾರೇ ವ್ಯಕ್ತಿಯ ಜೀವವನ್ನು ಅಥವಾ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕುದಲ್ಲ. ಅನುಚ್ಛೇದ32 ಸಂವಿಧಾನಾತ್ಮಕವಾಗಿ ಪ್ರದತ್ತವಾಗಿರುವ ಹಕ್ಕುಗಳ ಜಾರಿಗಾಗಿ ಇರುವ ಪರಿಹಾರೋಪಾಯಗಳು ಅಂದರೆ ಯಾವನೇ ಒಬ್ಬ ವ್ಯಕ್ತಿಯುತನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆ ಉಂಟಾದಾಗ ಆತ ನೇರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಈ ಅನುಚ್ಛೇದ ಅವಕಾಶವನ್ನು ನೀಡುತ್ತದೆ. ಅನುಚ್ಛೇದ 226 ಕೆಲವು ರಿಟ್ಟುಗಳನ್ನು ಹೊರಡಿಸಲು ಉಚ್ಚನ್ಯಾಯಾಲಯಗಳ ಅಧಿಕಾರ ಕುರಿತಂತೆ ಹೇಳುತ್ತದೆ. ಯಾವ ವ್ಯಕ್ತಿಯೇ ಆಗಲೀ ತನ್ನ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಆತ ನೇರವಾಗಿ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸುವ ಮೂಲಕ ನ್ಯಾಯಕ್ಕಾಗಿ ಮೊರೆ ಹೋಗಬಹುದಾಗಿದೆ.

**ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹಾಗೂ ಪರಿಸರ ಸಂರಕ್ಷಣೆ**

ಒಂದು ಆಶ್ಚರ್ಯಕರ ಸಂಗತಿ ಏನೆಂದರೆ ಭಾರತ ಸಂವಿಧಾನದ ಯಾವುದೇ ಭಾಗದಲ್ಲೂ ಈ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಕುರಿತಂತೆ ಪ್ರಸ್ತಾಪವಿಲ್ಲ. ಆದರೆ ಪರೋಕ್ಷವಾಗಿ ವಿವಿಧ ನ್ಯಾಯಿಕ ತೀರ್ಪುಗಳ ಮೂಲಕ ಅನುಚ್ಛೇದ 32 ಹಾಗೂ 226ರ ಅಡಿಯಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಮನೆ ಮಾಡಿಕೊಂಡಿದೆ ಎಂದೆನ್ನಬಹುದು.

1950ರ ದಶಕಗಳಲ್ಲಿ ಅಮೇರಿಕಾದಲ್ಲಿ ಜನಪ್ರಿಯವಾಗಿದ್ದ ಸಾರ್ವಜನಿಕ ಹಿತಾಸಕ್ತಿ ಕಾನೂನು ತದ ನಂತರದಲ್ಲಿ ಭಾರತಕ್ಕೂ ಪಾದಾರ್ಪಣೆ ಮಾಡಿತೆನ್ನಬಹುದು. ಆರಂಭದಲ್ಲಿ ಸಾಮಾಜಿಕ ಹಿತಾಸಕ್ತಿ ದಾವೆಯು ತದನಂತರ ಜನಪ್ರಿಯವಾಗಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಾಗಿ ಹೊರಹೊಮ್ಮಿತು. ಈ ನಿಟ್ಟಿನಲ್ಲಿ ಭಾರತದ ಸರ್ವೋಚ್ಚ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಚಂದ್ರಚೂಡ್, ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಹಾಗೂ ನ್ಯಾಯಮೂರ್ತಿ ಭಗವತಿರವರ ಪಾತ್ರ ಗಣನೀಯವಾದುದು. ಲೋಕಸ್ ಸ್ಟ್ಯಾಂಡಿ (Locus Standi) ಎಂಬ ವಾದಿಸುವ ಹಕ್ಕನ್ನೇ ವಿಸ್ತೃತಗೊಳಿಸಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ಅಸ್ತಿತ್ವ ಕಲ್ಪಿಸಲಾಯಿತು.

ಪರಿಸರ ಸಂರಕ್ಷಣೆ ಎಂಬುದು ಸಾರ್ವಜನಿಕ ಉದ್ದೇಶವನ್ನು ಒಳಗೊಂಡ ಅಂಶವಾಗಿದ್ದು, ಯಾವುದೇ ವ್ಯಕ್ತಿಯು ಸಮುದಾಯದ ಪರಿಸರ ಸಂರಕ್ಷಣೆಗಾಗಿ ಈ ಮೊಕದ್ದಮೆಯನ್ನು ಹೂಡಲು ಅವಕಾಶ ಕಲ್ಪಿಸಲಾಯಿತು. ಹಲವಾರು ನ್ಯಾಯಿಕ ನಿರ್ಣಯಗಳು ಇದಕ್ಕೆ ಸಾಕ್ಷಿಯಾಯಿತು ಎಂದೆನ್ನಬಹುದು. ಪರಿಸರ ಎನ್ನುವುದು ಯಾವುದೇ ವ್ಯಕ್ತಿಯ ಸ್ವತ್ತಲ್ಲ. ಪರಿಸರ ನಾಶ ಕ್ಷಮಿಸಲಾಗದ ಕೃತ್ಯ. ಪರಿಸರವಾದಿಗಳು, ಪರಿಸರ ಪ್ರೇಮಿಗಳು, ಸಾಮಾನ್ಯ ವ್ಯಕ್ತಿಗಳು ಈ ತೆರನಾದ ಮೊಕದ್ದಮೆ ಹೂಡುವ ಮೂಲಕ ಪರಿಸರ ಸಂರಕ್ಷಣೆ ಮುಂದಾಗಿರುವುದು ಶ್ಲಾಘನೀಯವೇ ಆಗಿದೆ.

**ವಾದಿಸುವ ಹಕ್ಕು ಹಾಗೂ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಮಹತ್ವ**

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯುಜಾರಿಗೆ ಬರುವ ಮೊದಲು ಲೋಕಸ್ ಸ್ಟ್ಯಾಂಡಿ ಎಂಬ ವಾದಿಸುವ ಹಕ್ಕಿನ ಅಸ್ಥಿತ್ವವಿತ್ತು. ಆರ್ಥಿಕವಾಗಿ, ಸಾಮಾಜಿಕವಾಗಿ ನೊಂದ ವ್ಯಕ್ತಿಗಳೆಲ್ಲರೂ ಕೂಡ ನೇರವಾಗಿ ನ್ಯಾಯಾಲಯದ ಮೊರೆ ಹೋಗುವುದು ಸಾಧ್ಯವಾಗುತ್ತಿರಲಿಲ್ಲ. ಕಟ್ಟುನಿಟ್ಟಿನ ಅಳವಡಿಕೆಯನ್ನು ಹೊಂದಿದ ವಾದಿಸುವ ಹಕ್ಕು / Locus Standi ಎಂಬ ಪರಿಭಾಷೆಯು ಸರಳೀಕೃತ ಸ್ವರೂಪವನ್ನು ಹೊಂದಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಎಂಬ ಹೆಸರಿನಿಂದ ವಿಭಿನ್ನ ಸ್ವರೂಪವನ್ನು ತಳೆದು ಹೊರಹೊಮ್ಮಿತು. ಈ ನಿಟ್ಟಿನಲ್ಲಿ 21ನೇ ಶತಮಾನದ ಆರಂಭವು ಅತೀ ಮಹತ್ವತೆಯನ್ನೂ ಕೂಡ ಪಡೆಯಿತು.

ಪರಿಸರವು ನಿರ್ದಿಷ್ಟ ವ್ಯಕ್ತಿಗೆ ಮಾತ್ರ ಸೀಮಿತವಾಗಿರದೇ ಇಡೀ ಸಮುದಾಯದ ಸ್ವತ್ತಾಗಿದೆ. ಒಬ್ಬ ವ್ಯಕ್ತಿಯು ಪರಿಸರಕ್ಕೆ ಹಾನಿಯನ್ನುಂಟು ಮಾಡಿದರೆ ಸಾಕು, ಆತನ ವಿರುದ್ಧ ಇಡೀ ಸಮುದಾಯವು ಪ್ರಶ್ನಿಸುವ ಹಕ್ಕನ್ನು ಹೊಂದಿರುತ್ತದೆ ಅಥವಾ ಇಡೀ ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಕೂಡ ಅದನ್ನು ಪ್ರಶ್ನಿಸಬಹುದಾಗಿದೆ. ಈ ನಿಟ್ಟಿನಲ್ಲಿ ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯವು ಪ್ರಬಲ ಸಂರಕ್ಷಕರಂತೆ ಕಾರ್ಯ ನಿರ್ವಹಿಸುತ್ತಿವೆ.

**ಪರಿಸರ ಸಂರಕ್ಷಣೆ ಸಂಬಂದಿತ ಪ್ರಮುಖ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು**

ಸರ್ವೋಚ್ಚ ನ್ಯಾಯಾಲಯವು ಪರಿಸರ ಸಂರಕ್ಷಣೆಯಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಬಹುದು. ಈ ನಿಟ್ಟಿನಲ್ಲಿ ಈ ನಿಟ್ಟಿನಲ್ಲಿ ಪ್ರಮುಖ ಪ್ರಕರಣಗಳನ್ನು ಉಲ್ಲೇಖಿಸಬಹುದಾಗಿದೆ.

**ರಟ್‌ಲಮ್ ಮುನಿಸಿಪಲ್ ಕೌನ್ಸಿಲ್ V/s ವರ್ಧೀಚಂದ್[6]**

ಸಾರ್ವಜನಿಕ ಉಪದ್ರವಕ್ಕೆ ಕಾರಣವಾದ ಶಾಸನಾತ್ಮಕ ಪ್ರಾಧಿಕಾರಿಯನ್ನು ಬಾಧ್ಯರನ್ನಾಗಿಸಿದ ಐತಿಹಾಸಿಕ ಪ್ರಕರಣ ಇದಾಗಿದೆ. ಮಾತ್ರವಲ್ಲದೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಒಂದು ಸಂವಿಧಾನಿಕ ಜವಾಬ್ದಾರಿಯೆಂದು ಎತ್ತಿ ಹಿಡಿಯಲಾಯಿತು.

**ಎಂ.ಸಿ. ಮೆಹತಾ V/s ಭಾರತಒಕ್ಕೂಟ (ಗಂಗಾಜಲ ಮಾಲಿನ್ಯ ಪ್ರಕರಣ)[7]**

ಈ ದಾವೆಯಲ್ಲಿ ಅರ್ಜಿದಾರನು ನದಿತೀರ ವಾಸಿಯಲ್ಲದಿದ್ದರೂ ಸಮುದಾಯದ, ಪರಿಸರದ ಮೇಲಿನ ಕಾಳಜಿಯನ್ನು ಗಮನಿಸಿ ದಾವೆಯನ್ನು ನಿರ್ಣಯಿಸಿ, ಜಲಮಾಲಿನ್ಯ ನಿಯಂತ್ರಣವನ್ನು ಸಾರಿತು.

---

[6] *AIR 1980 SC 1622*

[7] *AIR 1988 SC 1126*

**ಪೀಪಲ್ಸ್ ಯೂನಿನ್ ಫಾರ್ ಡೆಮೊಕ್ರಾಟಿಕ್ ರೈಟ್ಸ್ V/s ಭಾರತಒಕ್ಕೂಟ**[8]

ನ್ಯಾಯಾಲಯವು ಈ ದಾವೆಯಲ್ಲಿ "ಯಾವ ವ್ಯಕ್ತಿಯು ಆರ್ಥಿಕವಾಗಿ ಅಥವಾ ಸಾಮಾಜಿಕವಾಗಿ ತೀರಾ ಹಿಂದುಳಿದಿರುತ್ತಾರೋ ಅಂತಹ ವ್ಯಕ್ತಿಗಳು ನ್ಯಾಯಾಲಯದ ಮೆಟ್ಟಿಲೇರಲು ಹಿಂಜರಿಯುವರೋ, ಅಂತವರ ಹಿತಾಸಕ್ತಿ ರಕ್ಷಿಸಲು ಈ ರೀತಿಯ ದಾವೆ ಅತೀ ಸಹಕಾರಿ" ಎಂದು ತಿಳಿಸಿ PIL ನ ಮಹತ್ವವನ್ನು ಸಾರಿತು.

**ಓಲಿಯಂಗ್ಯಾಸ್ ಸೋರಿಕೆ ಪ್ರಕರಣ**[9]

ಅಪಾಯಕಾರಿ ಅನಿಲ ಸೋರಿಕೆಯಿಂದ ಪರಿಸರ ಮಾಲಿನ್ಯ ಉಂಟು ಮಾಡಿದವರ ವಿರುದ್ಧ PIL ದಾವೆಯನ್ನು ಹೂಡುವ ಮೂಲಕ ಉಲ್ಲಂಘನಾಕಾರರ ಮೇಲೆ ಬಾಧ್ಯತೆಯನ್ನು ಹೇರಲಾಯಿತು.

**ಎಂ.ಸಿ. ಮೆಹತಾ V/s ಭಾರತಒಕ್ಕೂಟ (ತಾಜ್‌ಮಹಲ್ ಮಾಲಿನ್ಯ ಪ್ರಕರಣ)**[10]

ಪರಿಸರ ಸಂರಕ್ಷಿಸಲು, ತಾಜ್‌ಮಹಲ್ ಸೌಂದರ್ಯವನ್ನು ಸಂರಕ್ಷಿಸಲು ಆಗ್ರಾದಲ್ಲಿನ ಸುಮಾರು 140 ಕೈಗಾರಿಕೆಗಳನ್ನು ಮುಚ್ಚಲು ಆದೇಶ ನೀಡಿತು.

**ಎಂ.ಸಿ. ಮೆಹತಾ V/s ಭಾರತಒಕ್ಕೂಟ ಮತ್ತು ಇತರರು (CNG ಮಾಲಿನ್ಯ ಪ್ರಕರಣ)**[11]

ಈ ದಾವೆಯ ಮೂಲಕ ಹೊಸ ಹಸಿರು ದಾವೆಯು ಭಾರತದಲ್ಲಿ ಆರಂಭವಾಯಿತು. ಅಲ್ಲದೇ ವಾಯು ಮಾಲಿನ್ಯ ನಿಷೇಧದ ಕುರಿತಂತೆ ದೆಹಲಿಯಲ್ಲಿ ಮಹತ್ವದ ತೀರ್ಪನ್ನು ಜಾರಿಗೆ ತಂದು CNG ಅನಿಲ ಬಳಕೆಯನ್ನು ಕಡ್ಡಾಯಗೊಳಿಸಿ ಪೆಟ್ರೋಲ್ ಬಳಕೆಯನ್ನು ಸಂಪೂರ್ಣ ನಿಷೇಧಿಸಬೇಕೆಂದು ಆದೇಶ ಹೊರಡಿಸಲಾಯಿತು.

**ಎಂ.ಸಿ. ಮೆಹತಾ V/s ಕಮಲ್‌ನಾಥ್ ಮತ್ತು ಇತರರು**[12]

ರಾಜ್ಯವು ಕೇವಲ ನ್ಯಾಸಧಾರಿಯೇ ಹೊರತು ರಾಜ್ಯವು ತನ್ನ ಸ್ವತ್ತಿನ ಒಡೆಯನಲ್ಲ, ಹಾಗಾಗಿ ತನ್ನ ಸ್ವತ್ತನ್ನು ಪರಭಾರೆ ಮಾಡದೇ ಸಂರಕ್ಷಿಸಬೇಕೆಂದು" ನ್ಯಾಯಾಲಯ ತೀರ್ಪನ್ನಿತ್ತಿತ್ತು.

**ರೂರಲ್ ಲಿಟಿಗೇಷನ್‌ಎಂಟೈಟಲ್‌ಮೆಂಟ್‌ಕೇಂದ್ರ, ಡೆಹರಾಡೂನ್ V/s ಉತ್ತರ ಪ್ರದೇಶ**[13]

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಮುಖಾಂತರ ಹೂಡಿದದಾವೆಯಲ್ಲಿ ಅರಣ್ಯ ಸಂರಕ್ಷಣೆಯ ಮಹತ್ವನ್ನು ಸಾರಿಕಲ್ಲುಗಣಿಗಾರಿಕೆಯ ಮೇಲೆ ನಿಷೇಧ ಹೇರಲಾಯಿತು.

---

[8] *AIR 1982 SC 1473*

[9] *AIR 1987 SC 1086*

[10] *AIR 2001 SCC 1509*

[11] *AIR 2001 SC 1948*

[12] *AIR 2000 SC 1997*

[13] *AIR 1985 SC 176*

**ಸುಭಾಷ್ ಕುಮಾರ್ V/s ಬಿಹಾರ ರಾಜ್ಯ[14]"**

ಅನುಚ್ಛೇದ 21 ಜೀವಿಸುವ ಹಕ್ಕನ್ನು ಹೇಳಿದರೂ, ಶುದ್ಧ ಪರಿಸರವನ್ನು ಆಸ್ವಾದಿಸುವ ಕುರಿತಂತೆಯೂ ಉಲ್ಲೇಖಿಸುತ್ತದೆ. ಒಂದು ವೇಳೆ ಯಾವೊಬ್ಬ ವ್ಯಕ್ತಿಯು ಪರಿಸರಕ್ಕೆ ತೊಂದರೆ ಎಸಗಿದರೆ ಅನುಚ್ಛೇದ 32ರ ಅಡಿಯಲ್ಲಿ ಭಾದ್ಯಗೊಳಿಸಬಹುದು" ಎಂಬ ಮಹತ್ವದ ತೀರ್ಪನ್ನು ನೀಡಲಾಯಿತು.

**ವೆಲ್ಲೋರ್ ಸಿಟಿಜನ್ ವೆಲ್‌ಫೇರ್ ಫೋರಂ V/s ಭಾರತ ಒಕ್ಕೂಟ ಮತ್ತು ಇತರರು[15]**

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಮೂಲಕ ಪರಿಸರ ಸಂರಕ್ಷಣೆಗಾಗಿ ಹೂಡಿದ ಈ ದಾವೆಯಲ್ಲಿ ಸಂವಿಧಾನದ ಅನುಚ್ಛೇದಗಳಾದ ಅನುಚ್ಛೇದ 47, 48A ಹಾಗೂ 51 A(g) ಯ ಮಹತ್ವವನ್ನು ಸಾರಲಾಯಿತು.

**ನರ್ಮದಾ ಬಚಾವೋ ಆಂದೋಲನ್ V/s ಭಾರತ ಒಕ್ಕೂಟ ಮತ್ತು ಇತರರು[16]**

ನೀರು, ಅರಣ್ಯ, ಸಸ್ಯಸಂಕುಲ, ಪ್ರಾಣಿ ಸಂಕುಲದ ಮಹತ್ವವನ್ನು ಸಾರಿದ ಈ ದಾವೆಯು ಪರಿಸರ ಹಾಗೂ ಅಭಿವೃದ್ಧಿ ಪರಿಸರ ಪೂರಕವಾಗಿ ಮುಂದುವರಿಯಬೇಕೆಂದು ಹೇಳಿ, "ಸುಸ್ಥಿರ ಅಭಿವೃದ್ಧಿ" ಎಂಬ ಹೊಸ ಪರಿಭಾಷೆಯ ಕುರಿತಂತೆ ಅಗಾಧವಾಗಿ ಚರ್ಚಿಸಲಾಯಿತು. ಆದರೆ ಇಂದು ಇದೇ ತೀರ್ಪಿಗೆ ತದ್‌ವಿರುದ್ಧವಾಗಿ ನಾವು ಅಗಾಧ ಶ್ರೀಮಂತ ಪರಿಸರವನ್ನು ಹಾಳುಮಾಡಿ ನರ್ಮದಾ ತೀರದಲ್ಲಿ ಭವ್ಯ ಸ್ಮಾರಕಕ್ಕೆ ಅವಕಾಶ ಕಲ್ಪಿಸಿರುವುದು ದುರ್ದೈವವೇ ಆಗಿದೆ.

**ಸಲಹೆ ಮತ್ತು ಶಿಫಾರಸ್ಸುಗಳು:**

ಪರಿಸರ ಸಂರಕ್ಷಣೆಯು ಅತೀ ಅಗತ್ಯವೆಂದು ನಮಗೆಲ್ಲಾ ತಿಳಿದಿದ್ದರೂ ಏಕ ಕಾಲದಲ್ಲಿ ಪರಿಸರ ಸಂರಕ್ಷಣೆಯ ಕೊರತೆಯನ್ನು / ಮಾಲಿನ್ಯವನ್ನು ನಿವಾರಿಸಲು ಸಾಧ್ಯವಾಗದ ಮಾತು. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನದ ಆಧಾರದ ಮೇಲೆ ಪರಿಸರ ಸಂರಕ್ಷಣೆಗೆ ಕೆಲವು ಸಲಹೆಗಳನ್ನು ನೀಡಬಹುದಾಗಿದೆ.

- ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಕುರಿತಂತೆ ಜಾಗೃತಿ ಮೂಡಿಸಬೇಕು.
- ಪರಿಸರ ಸಂಬಂದಿತ ದಾವೆಗಳ ಶೀಘ್ರ ವಿಲೇವಾರಿ ಮಾಡಬೇಕು.
- ಪರಿಸರ ಮಾಲಿನ್ಯ ಉಂಟು ಮಾಡಿದವರ ವಿರುದ್ಧ ಉಗ್ರ ಕ್ರಮಕೈಗೊಳ್ಳಬೇಕು.
- ಪರಿಸರ ಸ್ನೇಹಿ ವಸ್ತುಗಳ ಉತ್ಪಾದನೆಗೆ ಉತ್ತೇಜನ ನೀಡಬೇಕು.
- ಶಾಲಾ ಕಾಲೇಜು ಪಠ್ಯಕ್ರಮಗಳಲ್ಲಿ ಪರಿಸರದ ಕುರಿತಂತೆ, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಕುರಿತಂತೆ ವಿಶೇಷ ಭೋದನೆಯನ್ನು ಅಳವಡಿಸಬೇಕು.

---

[14] *AIR (1991) 1 SCC 598*

[15] *AIR 1996 SC 2715*

[16] *(2000) 10 SCC 664*

- ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ದುರುಪಯೋಗವಾಗದಂತೆ ನ್ಯಾಯಾಲಯವು ಈ ತೆರನಾದ ದಾವೆಗಳು ಬಂದಾಗ ಅರ್ಜಿದಾರನ ಮೂಲ ಉದ್ದೇಶಗಳ ಕುರಿತಂತೆಯೂ ಗಮನಹರಿಸಬೇಕು.
- ಕ್ಷುಲ್ಲಕ ದಾವೆಗಳ ಕುರಿತಂತೆ ಉಗ್ರಕ್ರಮ ಕೈಗೊಳ್ಳಬೇಕು.
- ಪರಿಸರ ಸಂಬಂಧಿತ ಕಾನೂನುಗಳ ದುರ್ಬಳಕೆಯಾಗದಂತೆ ಕಾವಲು ನಾಯಿಯ ತೆರದಲ್ಲಿ ಕಾರ್ಯನಿರ್ವಹಿಸಬೇಕು.
- ಪರಿಸರ ಪ್ರೇಮಿಗಳನ್ನು ಗುರುತಿಸಿ ಉತ್ತೇಜನವನ್ನು ನೀಡಬೇಕು.
- ಪರಿಸರ ಸ್ನೇಹಿ ಸರ್ಕಾರೇತರ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು.
- ಪರಿಸರ ಸಂರಕ್ಷಣಾ ಸಂಬಂಧಿತ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಪ್ರತ್ಯೇಕವಾಗಿ ಇನ್ನೂ ಹೆಚ್ಚಿನ ನ್ಯಾಯಾಲಯಗಳ ಸಂರಚನೆಯನ್ನು ಮಾಡಬೇಕು.
- ಪರಿಸರ ಕುರಿತಂತೆ, ಪರಿಸರ ಸಂಬಂಧಿತ ಕಾನೂನಗಳ ಮಹತ್ವವನ್ನು ಜಾಹೀರಾತಿನ ಮೂಲಕ ಜನರಿಗೆ ಅರಿವನ್ನು ಮೂಡಿಸಬೇಕು.
- ಪರಿಸರ ಮಾಲಿನ್ಯ ನಿಯಂತ್ರಣ ಪ್ರಾಧಿಕಾರಕ್ಕೆ ವಿಶೇಷ ಅಧಿಕಾರವನ್ನು ನೀಡಿ ಪ್ರಾಧಿಕಾರವನ್ನು ಬಲಪಡಿಸಿದರೆ, ಪರಿಸರ ಮಾಲಿನ್ಯ ನಿಯಂತ್ರಣವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬಹುದಾಗಿದೆ.
- ಪರಿಸರ ಸಂರಕ್ಷಣೆಯಲ್ಲಿ ಸರ್ಕಾರವು ಪೂರಕವಾಗಿ ಕಾರ್ಯನಿರ್ವಹಿಸಬೇಕೇ ಹೊರತು, ಅನಧೀಕೃತ ಹಸ್ತಕ್ಷೇಪ ಮಾಡಬಾರದು.

**ಉಪಸಂಹಾರ**

ಪ್ರತಿಯೊಬ್ಬ ಪ್ರಜೆಯೂ ಪರಿಸರವನ್ನು ಮಾಲಿನ್ಯದಿಂದ ರಕ್ಷಿಸುವ ಜವಾಬ್ದಾರಿಯನ್ನು ಹೊಂದಿದ್ದಾನೆ. ಬೇರೆಯವರು ಪರಿಸರ ಸಂರಕ್ಷಣೆಯನ್ನು ಮಾಡಲಿ ಎಂದು ಇತರರನ್ನೇ ಅಪರಾಧಿಗಳ ಸ್ಥಾನದಲ್ಲಿ ನೋಡುವ ನಾವು, **"ಬೇರೊಬ್ಬ"** ಎಂಬ ಪದದಲ್ಲಿ **"ನಾವೂ"** ಕೂಡ ಸೇರಿದ್ದೇವೆ ಎಂಬುದನ್ನು ಮರೆಯುತ್ತಿದ್ದೇವೆ. ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿತಕ್ಕೊಳಗಾದ, ಅಶಕ್ತರಾದ ವ್ಯಕ್ತಿಗಳ ರಕ್ಷಣೆಯಲ್ಲಿ ಈ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಒಂದು ಪ್ರತ್ಯೇಕಧ್ವನಿಯಾಗಿ ಹೊರಹೊಮ್ಮಿ, ನೊಂದವರ ಧ್ವನಿಯಾಗಿ ಹೊರಹೊಮ್ಮುತ್ತಿದೆ. ಭವಿಷ್ಯತ್ತಿನ ಕಾಳಜಿಯನ್ನು ಹೊಂದಿರುವ ಈ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯು ಪರಿಸರ ಸಂರಕ್ಷಣೆಯ ಕಾವಲುಗಾರ ಎಂದರೂ ತಪ್ಪಾಗಲಾರದು. ಪರಿಸರ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಬೇಕೇ ಹೊರತು, ದುರ್ಬಳಕೆ ಮಾಡಬಾರದು ಎಂಬ ಸೂಕ್ಷ್ಮವನ್ನು ಅರಿತರೆ, ಇಷ್ಟೆಲ್ಲಾ ಪ್ರಯತ್ನಗಳಿಗೆ ಒಂದು ಯೋಗ್ಯ ಪರಿಹಾರ ದೊರೆತಂತಾಗುತ್ತದೆ.

## ಪರಾಮರ್ಶನಾ ಗ್ರಂಥಗಳು


- Shaik, Ahmad (2019). Role of Public Interest Litigation in Environment Protection in India. Retrieved from https://papers.ssrn.com/sol3/papers.cfm?abstract_id=3394429

- Myneni, S.R. (2014). Environmental Law, Asia Law House, New Edition.

- Featuring Black's Law Dictionary Free online Legal Dictionary, 2nd Edition, Retrieved from http://thelowdictionary.org/envrionment/